# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸುವರ್ಣ ಗ್ರಾಮೋದಯ ಯೋಜನೆಯ ಐದನೇ ಹಂತದ ಅನುಷ್ಠಾನ ಕುರಿತಾದ ಮಾರ್ಗಸೂಚಿಗಳನ್ನು ಪರಿಷ್ಕೃತಗೊಳಿಸುವ ಕುರಿತು.

ಓದಲಾಗಿದೆ : (1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:29:ಸುಗ್ರಾಯೋ:2012, ದಿನಾಂಕ: 29.06.2012

(2) ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ: 29: ಸುಗ್ರಾಯೋ: 2012, ದಿನಾಂಕ: 04.07.2012

ಪ್ರಸ್ತಾವನೆ:

ರಾಜ್ಯ ಸರ್ಕಾರದ ಮಹತ್ವದ ಯೋಜನೆಯಾದ "ಸುವರ್ಣ ಗ್ರಾಮೋದಯ ಯೋಜನೆ"ಯ ಐದನೇ ಹಂತವು ದಿನಾಂಕ:29.062012ರಿಂದ ಜಾರಿಗೆ ಬಂದಿರುತ್ತದೆ. ಐದನೇ ಹಂತದ ಯೋಜನೆಯನ್ನು ಅನುಷ್ಠಾನಗೊಳಿಸುವ ಕುರಿತು ಓದಲಾದ(1)ರ ಸರ್ಕಾರದ ಆದೇಶವನ್ನು ಹೊರಡಿಸಲಾಗಿದೆ. ಐದನೇ ಹಂತದ ಯೋಜನೆಯನ್ನು ಅನುಷ್ಠಾನಗೊಳಿಸುವ ಕುರಿತು ವಿವರವಾದ ಮಾರ್ಗಸೂಚಿಗಳನ್ನು ಓದಲಾದ(2)ರ ಸರ್ಕಾರದ ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಓದಲಾದ(2)ರ ಸುತ್ತೋಲೆಯ ಅನುಸಾರ ಸುವರ್ಣ ಗ್ರಾಮೋದಯ ಯೋಜನೆಯ ಐದನೇ ಹಂತದಲ್ಲಿ ಆಯ್ಕೆಯಾದ ಗ್ರಾಮಗಳಿಗೆ ಈಗಾಗಲೇ ಹಂಚಿಕೆ ಮಾಡಿರುವ ಅನುದಾನ ಪೈಕಿ ಶೇ.70ರಷ್ಟು ಅನುದಾನವನ್ನು ರಸ್ತೆ ಮತ್ತು ಚರಂಡಿ ಕಾಮಗಾರಿಗಳ ಅನುಷ್ಠಾನಕ್ಕಾಗಿ; ಶೇ.3ರಷ್ಟು ಅನುದಾನವನ್ನು ಘನ ತ್ಯಾಜ್ಯವಸ್ತು ವಿಲೇವಾರಿ ಸಂಬಂಧಿತ ಕಾಮಗಾರಿಗಳ ಅನುಷ್ಠಾನಕ್ಕಾಗಿ; ಶೇ.2ರಷ್ಟು ಅನುದಾನವನ್ನು ಸೌರ ಬೀದಿ ದೀಪ ಅಳವಡಿಸುವ ಸಲುವಾಗಿ; ಶೇ.10ರಷ್ಟು ಅನುದಾನವನ್ನು ಒಂದು ಅಂಗನವಾಡಿ ಕಟ್ಟಡ ನಿರ್ಮಾಣ ಕಾಮಗಾರಿಗಾಗಿ ಹಾಗೂ ಉಳಿದ ಶೇ.15ರಷ್ಟು ಅನುದಾನವನ್ನು ಆದ್ಯತೆ ಹಾಗೂ ಅಗತ್ಯತೆ ಮೇರೆಗೆ ಶಾಲಾ ಕಟ್ಟಡ, ಗ್ರಾಮ ಪಂಚಾಯತಿ ಕಟ್ಟಡ, ಗ್ರಂಥಾಲಯ ಕಟ್ಟಡಕ್ಕೆ, ಮಹಿಳಾ ಸ್ವ-ಸಹಾಯ ಸಂಘಗಳ ಕಾರ್ಯಕೇಂದ್ರಗಳ (ವರ್ಕ್‌ಶೆಡ್) ನಿರ್ಮಾಣ, ಬಯಲು ರಂಗಮಂದಿರಗಳು ಮತ್ತು ಕೊನೆಯ ಆದ್ಯತೆಯಾಗಿ ಸಮುದಾಯ ಭವನಗಳು ಹಾಗೂ ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐ.ಇ.ಸಿ) ಚಟುವಟಿಕೆಗಳಿಗೆ ವಿನಿಯೋಗಿಸಲು ಅವಕಾಶ ಕಲ್ಪಿಸಲಾಗಿದೆ.

ಓದಲಾದ(2)ರ ಸುತ್ತೋಲೆಯ ಮೂಲಕ ಹೊರಡಿಸಲಾದ ಸುವರ್ಣ ಗ್ರಾಮೋದಯ ಯೋಜನೆಯ ಐದನೇ ಹಂತದ ಅನುಷ್ಠಾನ ಮಾರ್ಗಸೂಚಿಗಳನ್ನು ಆಡಳಿತಾತ್ಮಕ ಕಾರಣಗಳಿಗಾಗಿ ಬದಲಾಯಿಸಿ ಸ್ಮಶಾನ(ರುದ್ರಭೂಮಿ) ಅಭಿವೃದ್ಧಿಯ ಕಾಮಗಾರಿಗಳಿಗೆ ಅವಕಾಶ ನೀಡುವ ಅಗತ್ಯತೆಯನ್ನು ಸರ್ಕಾರವು ಮನಗಂಡಿದೆ. ಅದಕ್ಕಾಗಿ ಈ ಆದೇಶ.

## ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 37 ಸುಗ್ರಾಯೋ 2013, ಬೆಂಗಳೂರು, ದಿನಾಂಕ:12.07.2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು, ಸುವರ್ಣ ಗ್ರಾಮೋದಯ ಯೋಜನೆಯ ಐದನೇ ಹಂತವನ್ನು ಅನುಷ್ಠಾನಗೊಳಿಸುವ ಸಂಬಂಧ ಆಯ್ಕೆ ಮಾಡಲಾದ ಗ್ರಾಮಗಳಿಗೆ ಹಾಗು ಈ ಗ್ರಾಮಗಳಿಗೆ ಹಂಚಿಕೆ ಮಾಡಿರುವ ಅನುದಾನದ ವಿನಿಯೋಗಕ್ಕಾಗಿ ಓದಲಾದ(2)ರ ಸುತ್ತೋಲೆ ಮೂಲಕ ಹೊರಡಿಸಲಾಗಿದ್ದ ಮಾರ್ಗಸೂಚಿಗಳನ್ನು ಸ್ಮಶಾನ(ರುದ್ರಭೂಮಿ) ಅಭಿವೃದ್ಧಿಯ ಕಾಮಗಾರಿಗಳನ್ನು ಸೇರಿಸಿ ಈ ಕೆಳಗಿನಂತೆ ಮಾರ್ಪಡಿಸಿ ಆದೇಶಿಸಲಾಗಿದೆ. ಈ ಷರತ್ತುಗಳನ್ವಯ ಮಾತ್ರ ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.



15

1. ಗ್ರಾಮಗಳಿಗೆ ಈಗಾಗಲೇ ಹಂಚಿಕೆ ಮಾಡಿರುವ ಅನುದಾನ ಪೈಕಿ ಶೇ.70ರಷ್ಟು ಅನುದಾನವನ್ನು (ಸಿಸಿ) ಮತ್ತು ಚರಂಡಿ ಕಾಮಗಾರಿಗಳ ಅನುಷ್ಠಾನಕ್ಕಾಗಿ ವಿನಿಯೋಗಿಸುವುದು.
2. ಶೇ.3ರಷ್ಟು ಅನುದಾನವನ್ನು ಘನ ತ್ಯಾಜ್ಯವಸ್ತು ವಿಲೇವಾರಿ ಸಂಬಂಧಿತ ಕಾಮಗಾರಿಗಳ ಅನುಷ್ಠಾನಕ್ಕಾಗಿ ವಿನಿಯೋಗಿಸುವುದು.
3. ಶೇ.2ರಷ್ಟು ಅನುದಾನವನ್ನು ಸೌರ ಬೀದಿ ದೀಪ ಅಳವಡಿಸುವ ಸಲುವಾಗಿ ವಿನಿಯೋಗಿಸುವುದು.
4. ಶೇ.10ರಷ್ಟು ಅನುದಾನವನ್ನು ಒಂದು ಅಂಗನವಾಡಿ ಕಟ್ಟಡ ನಿರ್ಮಾಣ ಕಾಮಗಾರಿಗಾಗಿ ವಿನಿಯೋಗಿಸುವುದು.
5. ಶೇ.8ರಷ್ಟು ಅನುದಾನವನ್ನು ಸ್ಮಶಾನ ಅಥವಾ ರುದ್ರಭೂಮಿ ಅಭಿವೃದ್ಧಿ ಸಂಬಂಧಿತ ಕಾಮಗಾರಿಗಾಗಿ ವಿನಿಯೋಗಿಸುವುದು.
6. ಹಾಗು ಉಳಿದ ಶೇ.7ರಷ್ಟು ಅನುದಾನವನ್ನು ಆದ್ಯತೆ ಹಾಗೂ ಅಗತ್ಯತೆ ಮೇರೆಗೆ ಶಾಲಾ ಕಟ್ಟಡ, ಗ್ರಾಮ ಪಂಚಾಯತಿ ಕಟ್ಟಡ, ಗ್ರಂಥಾಲಯ ಕಟ್ಟಡಕ್ಕೆ, ಮಹಿಳಾ ಸ್ವ-ಸಹಾಯ ಸಂಘಗಳ ಕಾರ್ಯಕೇಂದ್ರಗಳ (ವರ್ಕ್‌ಶೆಡ್) ನಿರ್ಮಾಣ, ಬಯಲು ರಂಗಮಂದಿರಗಳು ಮತ್ತು ಕೊನೆಯ ಆದ್ಯತೆಯಾಗಿ ಸಮುದಾಯ ಭವನಗಳು ಹಾಗೂ ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐ.ಇ.ಸಿ) ಚಟುವಟಿಕೆಗಳಿಗೆ ವಿನಿಯೋಗಿಸಲು ಕ್ರಮವಹಿಸುವುದು.

ಇನ್ನುಳಿದಂತೆ ಓದಲಾದ(1)ರ ಸರ್ಕಾರದ ಆದೇಶ ಹಾಗು ಓದಲಾದ(2)ರ ಸರ್ಕಾರದ ಸುತ್ತೋಲೆಯಲ್ಲಿನ ಇತರೆ ಎಲ್ಲಾ ನಿಯಮ / ಷರತ್ತುಗಳು ಯೋಜನೆಯ ಐದನೇ ಹಂತದ ಅನುಷ್ಠಾನದಲ್ಲಿ ಅನ್ವಯವಾಗುತ್ತವೆ ಎಂದು ತಿಳಿಯತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶನುಸಾರ
ಮತ್ತು ಅವರ ಹೆಸರಿನಲ್ಲಿ

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು (ಸುವರ್ಣ ಗ್ರಾಮೋದಯ ಯೋಜನೆ)
ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿಯನ್ನು:

1. ಮಹಾ ಲೇಖಪಾಲರು(ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು.
2. ಮಹಾ ಲೇಖಪಾಲರು(ಆಡಿಟ್-1), ಕರ್ನಾಟಕ, ಬೆಂಗಳೂರು.
3. ಮಹಾ ಲೇಖಪಾಲರು(ಆಡಿಟ್-2), ಕರ್ನಾಟಕ, ಬೆಂಗಳೂರು.
4. ಮಾನ್ಯ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿ, ಮುಖ್ಯಮಂತ್ರಿಗಳ ಕಾರ್ಯಾಲಯ, ವಿಧಾನಸೌಧ, ಬೆಂಗಳೂರು.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಆಪ್ತ ಕಾರ್ಯದರ್ಶಿ. ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.